
ಕಂಬಾವ್ಯ
ವಿಶೇಷ ಸಂಚಿಕೆ 2024
ಬಂಡೆಗಲ್ಲಿನ ಮೇಲೂ
ಅರಳಿ ಬೆಳೆಯಲಿ ಬದುಕು

ಕೆಂಬಾವುಟ
ವಿಶೇಷಾಂಕ 2024
ಸಂಪುಟ : 51
ಸಂಚಿಕೆ : 1–4
ಬೆಲೆ : ರೂ. 50/-
ಒಟ್ಟು ಪುಟಗಳು: 130
ದಿನಾಂಕ: 09–09–2024

# ಪರಿವಿಡಿ


| | | |
|---|---|---|
| ಸಂಪಾದಕೀಯ.. | ಶಿವರಾಜ ರಾ. ಬಿರಾದಾರ | 6 |
| ಪುಸ್ತಕ ವ್ಯವಸಾಯದ ವಿಜ್ಞಾನಿ | ಡಾ॥ ಸಿದ್ದನಗೌಡ ಪಾಟೀಲ | 7 |
| ಆತಂಕದಂಗಳದಲ್ಲಿ ಸಂಸದೀಯ ಪ್ರಜಾಸತ್ತೆ | ಡಾ॥ ಸಿದ್ದನಗೌಡ ಪಾಟೀಲ | 9 |
| ಮತಧರ್ಮದ ಅನರ್ಥಕ ಪ್ರಭಾವದಿಂದ ಪ್ರಜಾಸತ್ತೆಗೆ ಕುತ್ತು | ಡಾ॥ ಜಿ. ರಾಮಕೃಷ್ಣ | 17 |
| ನಮ್ಮ ದೇಶದ ಪ್ರಜಾಪ್ರಭುತ್ವದ ಪುನರುಜ್ಜೀವನಕ್ಕೆ ಜನತೆಯ... | ಮ. ಶ್ರೀ. ಮುರಳಿ ಕೃಷ್ಣ | 25 |
| ಈ ವೈಪರಿತ್ಯವನ್ನು ಹೇಗೆ ತೊಡೆದು ಹಾಕುವದು? | ಅಯ್ಯಪ್ಪ ಹೂಗಾರ | 29 |
| ಮತದಾರರ ಪ್ರಜ್ಞೆಯಲ್ಲಿ ಜಾತಿ– ಒಂದು ವಿಶ್ಲೇಷಣೆ | ಪಿ. ಷಣ್ಮುಖಸ್ವಾಮಿ | 43 |
| ಪ್ರಜಾಸತ್ತೆಯ ಆಶಯಗಳೂ ಧರ್ಮಗಳ ಪಾರಮ್ಯವೂ | ನಾ ದಿವಾಕರ | 49 |
| 2024ರ ಸಾರ್ವತ್ರಿಕ ಚುನಾವಣೆಗಳ ಫಲಿತಾಂಶ: | ಡಾ. ಪ್ರಕಾಶ ದೇಸಾಯಿ | 59 |
| ಸುಳ್ಳು ಹೇಳುವ ಭಯಾನಕ ಕಾಯಿಲೆ | ಪ್ರೊ.ಎಂ.ಅಬ್ದುಲ್ ರೆಹಮಾನ್ ಪಾಷ | 67 |
| ಕನ್ನಡ ಚಳುವಳಿಯ ಪರಿಣಾಮಗಳು | ಡಾ॥ ಕಾ. ವೆಂ. ಶ್ರೀನಿವಾಸಮೂರ್ತಿ | 75 |
| ಚಿರಸ್ಮರಣೆಯ ನಿರಂಜನರ ಮರುಸ್ಮರಣೆ | ಹೆಚ್.ವಿ.ರಾವ್ | 85 |
| ಇಂದಿನ ಸಂಸತ್ತು ಮತ್ತು ಎಡ ಪಕ್ಷಗಳ ಪ್ರಸ್ತುತತೆ | ಡಾ.ಬಿ.ಆರ್. ಮಂಜುನಾಥ | 89 |
| ಶತಮಾನದಂಚಿನಲ್ಲಿ ಕಾಮ್ರೇಡ್ ಗೀತಾ ಮುಖರ್ಜಿಯ ನೆನಪು | ವಿ. ಕುಕ್ಯಾನ್ | 97 |
| ಇಂಡಿಯಾ ಒಕ್ಕೂಟದ ಮುಂದಿರುವ ಸವಾಲುಗಳು | ರಂಜಾನ್ ದರ್ಗಾ | 101 |
| ವರ್ತಮಾನ ಮತ್ತು ಚಳವಳಿಗಳ ಅವಲೋಕನ | ಟಿ.ಎಸ್. ರಾಜೇಂದ್ರಪ್ರಸಾದ್ | 107 |
| ಸಾಲುಮರದ ತಿಮ್ಮಕ್ಕ | ಡಾ. ಕೆ.ಷರೀಫಾ | 111 |
| ಕಥೆಯೊಂದರ ಆರಂಭ... | ಪೂರ್ಣೇಶ್ ಮತ್ತಾವರ | 115 |
| ಹಿರಿಯ ಕಮ್ಯುನಿಸ್ಟ್ ಮುಖಂಡ ಕಾಮ್ರೇಡ್ ಆನಂದರಾಜ್.. | ಕೆ. ರಾಘವೇಂದ್ರ ನಾಯರಿ | 121 |
| ಹಕ್ಕುಗಳ ರಕ್ಷಣೆಗೆ ಯುವಕಾರ್ಮಿಕರು ಮುಂದಾಗಲಿ | ಶ್ರಮಜೀವಿ | 125 |
| ವರ್ಗಪ್ರಜ್ಞೆಯಿಂದ ವಿಮುಖವಾಗುತ್ತಿರುವ ಭಾರತದ ಶ್ರಮಿಕ | ಬಿ. ಅಮ್ಜದ್ | 129 |
| ಕವನಗಳು – | 15, 47, 57, 65, 83, 105, 109, 119, 123, 127, 130 | |


ಸಂಪಾದಕರು
ಶಿವರಾಜ ರಾ. ಬಿರಾದಾರ

ಸಂಪಾದಕ ಮಂಡಳಿ
ಡಾ. ಸಿದ್ದನಗೌಡ ಪಾಟೀಲ
ಪಿ. ವಿ. ಲೋಕೇಶ್
ಎಮ್. ಸತ್ಯಾನಂದ
ಜ್ಯೋತಿ ಎ.
ಬಿ. ಅಮ್ಜದ್
ಕೆ.ಎಸ್.ಜನಾರ್ಧನ್

# 2024ರ ಸಾರ್ವತ್ರಿಕ ಚುನಾವಣೆಗಳ ಫಲಿತಾಂಶ: ಪ್ರಗತಿಪರರ ಎದುರಿಗಿರುವ ಸವಾಲುಗಳು ಮತ್ತು ಜವಾಬ್ದಾರಿಗಳು



ಡಾ. ಪ್ರಕಾಶ ದೇಸಾಯಿ

2024ರ ಸಾರ್ವತ್ರಿಕ ಚುನಾವಣೆಯ ಫಲಿತಾಂಶವು ದೇಶದ ವಿವಿಧ ವಲಯಗಳಲ್ಲಿ ಉಂಟಾಗಿದ್ದ ಉಸಿರುಗಟ್ಟಿಸುವಂತಹ ವಾತಾವರಣವನ್ನು ಹಗುರವಾಗಿ ಮಾಡಿದೆ. ಶಿಕ್ಷಣ ಕ್ಷೇತ್ರದಲ್ಲಿ, ರಾಜಕೀಯ ವಲಯದಲ್ಲಿ ಮತ್ತು ನಾಗರಿಕ ಸಮಾಜದಲ್ಲಿ ಒಕ್ಕೂಟ ಸರ್ಕಾರದ ನ್ಯೂನ್ಯತೆಗಳನ್ನು ಮತ್ತು ಜನ ವಿರೋಧಿ ನೀತಿಗಳನ್ನು ಯಾವುದೇ ಹೆದರಿಕೆ ಇಲ್ಲದೆ ಪ್ರಶ್ನಿಸುವ ಧೈರ್ಯ ಮೂಡಿದೆ. ಈ ಮೊದಲು, ತನ್ನ ಆಡಳಿತಾವಧಿಯಲ್ಲಿ ಭಾರತೀಯ ಜನತಾ ಪಕ್ಷವು ವಿವಿಧ ತರಹದ ಮಾರ್ಗಗಳ ಮೂಲಕ ಜನವಿರೋಧಿ ಕೃತಿ ಮತ್ತು ನೀತಿಗಳನ್ನು ವಿರೋಧಿಸುವ ರಾಜಕೀಯ ಮತ್ತು ನಾಗರಿಕ ಸಮಾಜದ ಶಕ್ತಿಗಳನ್ನು ಹತ್ತಿಕ್ಕುವ ಪ್ರಯತ್ನ ಮಾಡಿತ್ತು ಮತ್ತು ಈಗಲೂ ಆ ಸಾಹಸವನ್ನು ಮಾಡಬಹುದು. ಆದರೆ, ಈಗ ಅಂತಹ ದುಸ್ಸಾಹಸ ಅಷ್ಟು ಸುಲಭವಾಗಿ ಮಾಡುವಂತಿಲ್ಲ. ಇದನ್ನು ಪ್ರಶ್ನಿಸುವ ಮತ್ತು ವಿರೋಧಿಸುವ ಶಕ್ತಿ ವಿರೋಧ ಪಕ್ಷಗಳು ಮತ್ತು ನಾಗರಿಕ ಸಮಾಜಕ್ಕೆ ಬಂದಿದೆ. ಈ ಕಳೆದ ಒಂದೂವರೆ ತಿಂಗಳಲ್ಲಿ ನಡೆದಿರುವ ಸಂಸತ್ತಿನ ಕಾರ್ಯ-ಕಲಾಪಗಳನ್ನು ಗಮನಿಸಿದಾಗ, ಬಿಜೆಪಿ ಧುರೀಣರಲ್ಲಿ ಈ ಮೊದಲು ಇರುವ ಧೈರ್ಯ ಕುಗ್ಗಿದೆ. ವಿರೋಧ ಪಕ್ಷಗಳು ತಮ್ಮ ಸಂಖ್ಯಾ ಮತ್ತು ಬೌದ್ಧಿಕ ಬಲದಿಂದ ಆಡಳಿತ ಪಕ್ಷಕ್ಕೆ ಹೊಣೆಗಾರಿಕೆಯ ಮಹತ್ವವನ್ನು ತಿಳಿಸಿಕೊಡುತ್ತಿವೆ. ಈ ಮುಂದಿನ 5 ವರ್ಷಗಳು ದೇಶದ ಪ್ರಜಾಪ್ರಭುತ್ವದ ಹಿತದೃಷ್ಟಿಗಾಗಿ ಬಹಳ ಮಹತ್ವವಾಗಿವೆ. ಕಳೆದ ಹತ್ತು ವರ್ಷಗಳ ರಾಜಕೀಯ, ಆರ್ಥಿಕ ವಿಷಯಗಳನ್ನು ಅವಲೋಕಿಸಿದಾಗ, ದೇಶ ಹೊಣೆಗಾರಿಕೆ ಇಲ್ಲದ ರಾಜಕೀಯ ವ್ಯವಸ್ಥೆಯಾಗಿ ಬದಲಾಗುತ್ತಿರುವ ಸಂಶಯಗಳು ನಮ್ಮನ್ನು ಕಾಡುತಿದ್ದವು. ಪ್ರಜಾಪ್ರಭುತ್ವವೆಂಬುವದು ಸಮನಾಗಿ ಅನುಭವಿಸುವ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಯೋಜನೆಯೆಂದು, ಈ ದೇಶದ ಮತದಾರರು ಮತ್ತು ಪ್ರಗತಿಪರ ರಾಜಕೀಯ ಶಕ್ತಿಗಳು ಕಳೆದ ಚುನಾವಣೆಯಲ್ಲಿ ಆಡಳಿತ ಪಕ್ಷಕ್ಕೆ ರಾಜಕೀಯ ಪಾಠವನ್ನು ಕಲಿಸಿದವು. ಈ ಕೆಲಸ ಇಲ್ಲಿಗೆ ನಿಲ್ಲಕೂಡದು. ದೇಶದ ಸಂವಿಧಾನದ ಆಶಯಗಳಂತೆ ಕೆಲಸಮಾಡುವ ರಾಜಕೀಯ ಪಕ್ಷಗಳನ್ನು ಅಧಿಕಾರಕ್ಕೆ ತರುವ ಅಥವಾ ಸಂವಿಧಾನದ ಕೆಲವು ಮಹತ್ವ ಆಶಯಗಳಿಗೆ ಬದ್ಧತೆ ತೋರದ ರಾಜಕೀಯ ಶಕ್ತಿಗಳಿಗೆ ಬದ್ಧತೆಯನ್ನು ಕಲಿಸಿಕೊಡುವ ಕೆಲಸ ಪ್ರಾಮಾಣಿಕವಾಗಿ ನಡೆಯಬೇಕಾಗಿದೆ. ಮುಂದಿನ 5 ವರ್ಷಗಳ ಸಮಯದಲ್ಲಿ ಪ್ರಗತಿಪರ ಚಿಂತಕರು ಮತ್ತು ಪಕ್ಷಗಳು ಅನೇಕ ಸವಾಲುಗಳನ್ನು ಮತ್ತು ಜವಾಬ್ದಾರಿಗಳನ್ನು ಎದುರಿಸಿ ದೇಶದ ಎಲ್ಲ ನಾಗರಿಕರಿಗೆ ನೈಜ ಪ್ರಜಾಪ್ರಭುತ್ವದ ಭರವಸೆಯನ್ನು ಸಾಕಾರಗೊಳ್ಳಿಸುವಲ್ಲಿ ಮಹತ್ತರ ಪಾತ್ರವನ್ನು ನಿರ್ವಹಿಸುವ ಹೊಣೆಗಾರಿಕೆ ತೋರಿಸಬೇಕಾಗಿದೆ. ಪ್ರಸ್ತುತ ಪ್ರಭಂದದಲ್ಲಿ, ಮುಂಬರುವ ಸವಾಲು ಮತ್ತು ಜವಾಬ್ದಾರಿಗಳ ಸಂಕ್ಷಿಪ್ತ ವಿವರಣೆಯ ಪ್ರಯತ್ನ ಮಾಡಲಾಗುವದು.

## ಎಡ ಪಕ್ಷಗಳು ಮತ್ತು ಸಮಾಜವಾದಿ ಪಕ್ಷಗಳು ನಿಭಾಯಿಸುವ ಕೆಲಸಗಳು

ದೇಶದ ನಿರ್ಣಾಯಕ ದಿನಗಳಲ್ಲಿ ಎಡ ಪಕ್ಷಗಳು ತಮ್ಮದೆಯಾದ ಮಹತ್ತರ ಪಾತ್ರವನ್ನು ವಹಿಸಿವೆ. ಈಗಲೂ ಕೂಡಾ ಅಂತಹ ಪಾತ್ರವನ್ನು ವಹಿಸುವ ಕಾಲ ಬಂದಿದೆ. ಎಲ್ಲ ಪಕ್ಷಗಳ ತುಲನೆ ಮಾಡಿದಾಗ ಎಡ ಪಕ್ಷಗಳಲ್ಲಿ ರಾಜಕೀಯ ನೈತಿಕತೆ ಉಳಿದಿದೆ. ದೇಶದ ಮಿಕ್ಕ ಪಕ್ಷಗಳಿಗೆ ರಾಜಕೀಯ ನೈತಿಕತೆ ಬಗ್ಗೆ ಪಾಠ ಮಾಡುವ ಸಾಮರ್ಥ್ಯ ಎಡಪಕ್ಷಗಳಲ್ಲಿ ಮಾತ್ರ ಉಂಟೆಂದು ನೇರವಾಗಿ ಹೇಳಬಹುದು. ಆದರೆ, ಎಡಪಕ್ಷಗಳು ಯಾವುದೇ ತರಹದ ವಿಮರ್ಷೆಯಿಂದ ಪ್ರತ್ಯೇಕವಲ್ಲ. ಎಡಪಕ್ಷಗಳಲ್ಲಿ ಬಹಳ ವರುಷಗಳಿಂದ ಕಾಣುವ ಬಹುದೊಡ್ಡ ಕೊರತೆಯೆಂದರೆ ಒಗ್ಗಟ್ಟಿನ ಕೊರತೆ. ಸಿದ್ಧಾಂತದ ಸಾಮಿಪ್ಯವಿದ್ದರೂ ಸಂಘಟನೆಯ ಐಕ್ಯತೆ ಇರದೆ ಎಡಪಕ್ಷಗಳು ಹಲವು ಪಕ್ಷಗಳಾಗಿ ಕಾರ್ಯನಿರ್ವಹಿಸುತ್ತಿವೆ. ಹೀಗಾಗಿ, ಬಂಡವಾಳಶಾಹಿ ಮತ್ತು ಕೋಮುವಾದಿ ಶಕ್ತಿಗಳ ಬಲವನ್ನು ತಗ್ಗಿಸುವ ಕೆಲಸ ಅವುಗಳಿಂದ ಸಮರ್ಪಕವಾಗಿ ಆಗುತ್ತಿಲ್ಲ. ಎಡ ಸಿದ್ಧಾಂತದ ರಾಜಕೀಯ ಶಕ್ತಿಗಳು ಒಂದೆ ಪಕ್ಷವಾಗಿ ತಮ್ಮ ಐಕ್ಯತೆಯನ್ನು ತೋರಿಸಿದರೆ ಕೋಮುವಾದದ ವಿರುದ್ಧ ಹೋರಾಟ ಸರಳ ಮತ್ತು ಸಫಲವಾಗಬಹುದು. ಜನಸಂಪರ್ಕವಿಲ್ಲದ ಕೆಲವು ನಾಯಕರುಗಳ ಮೇಲೆ ಹೆಚ್ಚಿನ ನಾಯಕತ್ವದ ಪಟ್ಟವನ್ನು ಕೊಟ್ಟು ಪಕ್ಷಗಳನ್ನು ನಡೆಸಿದರೆ ಪಕ್ಷಗಳು ಸಿದ್ಧಾಂತದ ಅನುಷ್ಠಾನದ ಚಟುವಟಿಕೆಗಳಲ್ಲಿ ಸಫಲವಾಗುವದಿಲ್ಲ.

ತಾತ್ವಿಕ ನೈತಿಕತೆ ಹೊಂದಿರುವ ಮತ್ತು ಜನಸಂಪರ್ಕದಲ್ಲಿರುವ ನಾಯಕರು ಪಕ್ಷಗಳ ನೇತೃತ್ವವನ್ನು ವಹಿಸಿದರೆ ಪಕ್ಷಗಳ ಮೇಲೆ ಜನರ ನಂಬಿಕೆ ಹೆಚ್ಚಾಗುವದು. ದೇಶದ ಈ ಸಮಯದಲ್ಲಿ ಒಳ್ಳೆಯ ನಾಯಕರುಗಳನ್ನು ಮುಂಚೂಣಿಯಲ್ಲಿ ತರುವದು ಎಡಪಕ್ಷಗಳು ನಿಭಾಯಿಸಬೇಕಾದ ಒಂದು ಕೆಲಸವಾಗಿದೆ.

ಈಗಲೂ ಕೂಡಾ ಸಮಾಜವಾದಿಗಳಾದ, ಶಾಂತವೇರಿ ಗೋಪಾಲಗೌಡರು, ಉತ್ತರ ಕರ್ನಾಟಕದಲ್ಲಿ ವಿರುಪಾಕ್ಷಪ್ಪ ಅಬ್ಬಿಗೇರಿ ಮತ್ತು ಇತರರನ್ನು ನಮ್ಮಲ್ಲಿ ಅನೇಕರು ನೆನಪಿಸಿಕೊಳ್ಳುತ್ತಾರೆ. ಈ ನಾಯಕರುಗಳು ಎಡಪಕ್ಷಗಳಲ್ಲಿರಲಿಲ್ಲ. ಇವರ ಮಟ್ಟಕ್ಕಿರುವ ಮತ್ತು ಅವರಿಗಿಂತ ಹೆಚ್ಚಿನ ಮಟ್ಟದಲ್ಲಿದ್ದ ರಾಜ್ಯದ ನಾಯಕರುಗಳು ಎಡಪಕ್ಷದಲ್ಲಿದ್ದರು. ಶ್ರೀನಿವಾಸ ಗುಡಿ, ಬಿ.ವಿ.ಕಕ್ಕಿಲಾಯ, ಎಂ.ಎಸ್.ಕೃಷ್ಣನ್‌ರವರಂತಹ ಇನ್ನು ಹಲವಾರು ನಾಯಕರುಗಳು ಪಕ್ಷದ ಸಂಘಟನೆಯಲ್ಲಿ ಮಹತ್ತರ ಪಾತ್ರವನ್ನು ವಹಿಸಿದ್ದರು. ಈ ಸಮಾಜವಾದಿಗಳು ತಮ್ಮ ವಯಕ್ತಿಕ ಜೀವನ ಮತ್ತು ಸಾರ್ವಜನಿಕ ಜೀವನದಲ್ಲಿ ಕಾಪಾಡಿಕೊಂಡಿದ್ದ ಸರಳ ಮತ್ತು ಪಾರದರ್ಶಕತೆಯ ನಾಯಕತ್ವದ ಶೈಲಿ ಈಗಲೂ ನೆನಪಿಸಲಾಗುತ್ತದೆ. ಇವರುಗಳು ಆದರ್ಶ ಮತ್ತು ನಂಬಿಕೆಗಳನ್ನೆ ಸಂಪಾದಿಸಿ ಸಮಾಜದ ಭವಿಷ್ಯಕ್ಕಾಗಿ ಮಾನವೀಯ ವಿಚಾರಗಳನ್ನೆ ಹೇಳಿ ಹೋದರು ಹೊರತು ಆಸ್ತಿ ಮಾಡಲಿಲ್ಲ ಮತ್ತು ಕುಟುಂಬದ ರಾಜಕಾರಣ ಬೆಳೆಸಲಿಲ್ಲ. ಇಂತಹ ನಾಯಕರು ಇನ್ನೂ ಕೂಡಾ ಎಡ ಮತ್ತು ಮಿಕ್ಕ ಸಮಾಜವಾದಿ ಪಕ್ಷಗಳಲ್ಲಿ ಇರುವರು. ಇಂತಹ ನಾಯಕರ ನಾಯಕತ್ವದಲ್ಲಿ ಭರವಸೆಯನ್ನು ತೋರಿಸಿ ದೇಶ ಮತ್ತು ಸಾಮಾನ್ಯ ಜನರ ಸಲುವಾಗಿ ಪಕ್ಷದ ಚಟುವಟಿಕೆಗಳನ್ನು ಮುಂದುವರೆಸಿದರೆ ಪಕ್ಷಗಳ ಬಗ್ಗೆ ಜನರಲ್ಲಿ ಹೆಚ್ಚಿನ ವಿಶ್ವಾಸರ್ಹತೆಯನ್ನು ಕಾಣಬಹುದು. ಇಲ್ಲವಾದಲ್ಲಿ ಸಾಮಾನ್ಯ ಜನರು ಪಕ್ಷ ಮತ್ತು ಅವುಗಳ ಆದರ್ಶ ಮತ್ತು ಸಿದ್ಧಾಂತಗಳ ಬಗ್ಗೆ ನಂಬಿಕೆ ಕಳೆದುಕೊಳ್ಳಬಹುದು. ಎಡಪಕ್ಷಗಳ ಮತ್ತು ಚಳುವಳಿಗಳ ಭದ್ರಕೋಟೆಯೆಂದು ಗುರುತಿಸಿಕೊಂಡಿದ್ದ ಬಂಗಾಲದಲ್ಲಿ ಕಳೆದ ಒಂದು ದಶಕಗಳಿಗಿಂತ ಜಾಸ್ತಿ ಸಮಯದಿಂದ ಈ ಪಕ್ಷಗಳು ಜನ ಮನ್ನಣೆಯನ್ನು ಕಳೆದುಕೊಳ್ಳುತ್ತಿವೆ. ಇದಕ್ಕೆ ಕಾರಣಗಳು ಯಾವವು ಎಂಬುದನ್ನು ತಿಳಿದು ಎಡಪಕ್ಷಗಳು ಮತ್ತು ಅವುಗಳ ಪ್ರಜಾಸತ್ತಾತ್ಮಕ ಚಳುವಳಿಗಳು ಮರಳಿ ಜನಮನ್ನಣೆಯನ್ನು ಪಡೆಯಬಹುದಿತ್ತು. ಈ ಕೆಲಸ ಆಗಲಾರದಕ್ಕೆ ಪಕ್ಷಗಳು ಮತ್ತು ನಾಯಕರ ನಡುವಿನ ಆಂತರಿಕ ಜಗಳಗಳು ಕಾರಣವೆಂದು ಹೇಳಬಹುದು. ಬಂಗಾಳ ಮತ್ತು ತ್ರಿಪುರಾದಂತಹ ಭದ್ರಕೋಟೆಗಳಲ್ಲಿ ಈ ಅವನತಿ ಬಂದರೆ ಮಿಕ್ಕ ಪ್ರದೇಶಗಳಲ್ಲಿ ಪರಿಸ್ಥಿತಿ ಏನಾಗಬಹುದೆಂದು ಎಡಪಕ್ಷಗಳು ತಿಳಿದುಕೊಳ್ಳಬೇಕು.

## ರಾಷ್ಟ್ರೀಯ ಪಕ್ಷಗಳ ಹಿರಿ ಅಕ್ಕ(ಳ)/ಅಣ್ಣ(ನ) ಬುದ್ಧಿ

ಕಳೆದ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್ ಪಕ್ಷವು ರಾಜಕೀಯ ಪರಿಪಕ್ವತೆಯನ್ನು ತೋರಿಸಿ ಎಲ್ಲ ವಿರೋಧ ಪಕ್ಷಗಳ ಜೊತೆಗೂಡಿ ಅವುಗಳ ಸಹಕಾರದಿಂದ ಕೋಮುವಾದಿ ಆಡಳಿತ ಪಕ್ಷದ ಪ್ರಾಬಲ್ಯವನ್ನು ಕಡಿಮೆ ಮಾಡುವಲ್ಲಿ ಸಫಲವಾಯಿತು. ಆಡಳಿತ ಪಕ್ಷದ ಜನವಿರೋಧಿ ನೀತಿ ಮತ್ತು ಕಾರ್ಯಗಳಿಂದ ಬೇಸತ್ತ ಜನರಿಗೆ ಕಾಂಗ್ರೆಸ್ ಮತ್ತು ಇತರ ಪಕ್ಷಗಳ ಬಣ ಆಶಾಕಿರಣವಾಗಿ ಹೊರಹೊಮ್ಮಿತು. ಈ ತರಹದ ರಾಜಕೀಯ ಪರಿಪಕ್ವತೆಯಿಂದ ಕೊಂಚ ಮಟ್ಟಿಗೆ ದೇಶದ ಪ್ರಜಾಪ್ರಭುತ್ವದ ಆರೋಗ್ಯದಲ್ಲಿ ಚೇತರಿಕೆಯನ್ನು ನೋಡುವಂತಾಯಿತು. ದೇಶದ ಪ್ರಜಾಪ್ರಭುತ್ವವು ಇನ್ನೂ ಹೆಚ್ಚಿಗೆ ಆರೋಗ್ಯಯುತವಾಗಿರಲು ಕಾಂಗ್ರೆಸ್, ಎಡಪಕ್ಷಗಳು, ಸಮಾಜವಾದಿ ಪಕ್ಷಗಳು ಮತ್ತು ಇತರೆ ಪ್ರಾದೇಶಿಕ ಪಕ್ಷಗಳು ರಾಜಕೀಯ ಪರಿಪಕ್ವತೆಯನ್ನು ಸತತವಾಗಿ ತೋರಿ ಪ್ರಜಾಪ್ರಭುತ್ವ ಎಲ್ಲ ಜನರಿಗಾಗಿ ಇರುವ ರಾಜಕೀಯ ವ್ಯವಸ್ಥೆಯೆಂದು ಸಾಬೀತು ಮಾಡುವಂತಾಗಬೇಕು. ಮುಂದಿನ ದಿನಗಳಲ್ಲಿ ಅವುಗಳಲ್ಲಿ ಯಾವುದೆ ತರಹದ ಪರಸ್ಪರ ರಾಜಕೀಯ ತಿಕ್ಕಾಟವಾಗದಿದ್ದರೆ ಕೋಮುವಾದಿ ಶಕ್ತಿಗಳನ್ನು ಸರಳವಾಗಿ ಸೋಲಿಸಬಹುದು. ತನ್ನ ಸಂಖ್ಯಾಬಲದ ಮತ್ತು ಸಂಘಟನಾ ಶಕ್ತಿಯಿಂದ ಕಾಂಗ್ರೆಸ್ ಪಕ್ಷವು ಮಿಕ್ಕ ವಿರೋಧ ಪಕ್ಷಗಳ ಮೇಲೆ, ಯಾವದೇ ಒಂದು ಕುಟುಂಬದಲ್ಲಿ ಹಿರಿ ಅಕ್ಕ/ಅಣ್ಣ ತೋರಿಸುವ ನಕಾರಾತ್ಮಕ ಹಿರಿತನ ತೋರಿಸುವ ಹಾಗೆ, ರಾಜಕೀಯ ಚಟುವಟಿಕೆಯಲ್ಲಿ ತನ್ನ ನಕಾರಾತ್ಮಕ ಹಿರಿತನ ಮತ್ತು ಪ್ರಾಬಲ್ಯವನ್ನು ತೋರಿಸಿ ಕೋಮುವಾದ ವಿರೋಧಿ ಬಣದ ಶಕ್ತಿಯನ್ನು ದುರುಪಯೋಗ ಮಾಡಿದರೆ ಮತ್ತೆ ಕೊಮುವಾದಿ ಪಕ್ಷಗಳು ಪ್ರಾಬಲ್ಯವಾಗಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಅದೇ ರೀತಿ ಮಿಕ್ಕ ವಿರೋಧಿ ಪಕ್ಷಗಳು ಕೂಡಾ ಸಧ್ಯದಲ್ಲಿರುವ ರಾಜಕೀಯ ಬಣದಲ್ಲಿ ಯಾವುದೆ ತರಹದ ಬಿರುಕು ಮೂಡದಂತೆ ವರ್ತಿಸಬೇಕು.

## ಪ್ರಾದೇಶಿಕ ಪಕ್ಷಗಳು

ದೇಶದ ಅನೇಕ ಪ್ರಾಂತ್ಯಗಳಲ್ಲಿ ಜನಪರ ವಿಚಾರ ಮತ್ತು ಆಡಳಿತವನ್ನು ಕೊಡುವದರಲ್ಲಿ ಆಯಾ ಪ್ರಾಂತ್ಯದ ರಾಜಕೀಯ ಪಕ್ಷಗಳು ಹೆಸರು ಮಾಡಿವೆ. ಪ್ರಾಂತ್ಯಗಳ ಸಂಸ್ಕೃತಿ, ಭಾಷೆ ಮತ್ತು ಅಭಿವೃದ್ಧಿ ವಿಷಯಗಳ ಕುರಿತು ಪ್ರಾದೇಶಿಕ ಪಕ್ಷಗಳು ತೋರಿಸುವ ಕಳಕಳಿ ರಾಷ್ಟ್ರೀಯ ಪಕ್ಷಗಳು ತೋರಿಸುವದು ಕಡಿಮೆ. ಸಾಂಸ್ಕೃತಿಕ ವೈವಿಧ್ಯತೆ ಭಾರತ ದೇಶದ ವಾಸ್ತವ. ದೇಶದ ಸಾಂಸ್ಕೃತಿಕ ವೈವಿಧ್ಯತೆಯನ್ನು ಕಾಪಾಡುದರಲ್ಲಿ ಪ್ರಗತಿಪರ ಪ್ರಾದೇಶಿಕ ಪಕ್ಷಗಳಿಂದಲೇ ಸಾಧ್ಯ ಎಂದು 2024ರ ಚುನಾವಣೆಗಳು ಸಾಬಿತು ಪಡಿಸಿವೆ. ಹೀಗಾಗಿ, ರಾಷ್ಟ್ರವಾದದ ಹೆಸರಿನಲ್ಲಿ ದೇಶದ ವೈವಿಧ್ಯತೆಗೆ ಧಕ್ಕೆ ತರುತ್ತಿರುವ ಕೋಮುವಾದಿ ಪಕ್ಷಗಳನ್ನು ತಡೆದು ವೈವಿಧ್ಯಮಯ ಸಮಾಜದಲ್ಲಿಯೂ ಕೂಡಾ ಪ್ರಜಾಪ್ರಭುತ್ವವನ್ನು ಸಫಲ ರಾಜಕೀಯ ವ್ಯವಸ್ಥೆಯನ್ನಾಗಿ ಕಾಪಾಡಿಕೊಂಡು ಹೋಗಬಹುದು ಎಂಬ ರಾಜಕೀಯ ಸತ್ಯವನ್ನು ತಿಳಿಸಿಕೊಡುವ ನಿರಂತರ ಕೆಲಸ ಪ್ರಾದೇಶಿಕ ಪಕ್ಷಗಳು ಮಾಡಬೇಕು. ಪ್ರಾದೇಶಿಕತೆ ರಾಷ್ಟ್ರೀಯತೆಯ ಒಂದು ಮೌಲ್ಯಯುತ ಭಾಗ ಎಂದು ಈ ಪಕ್ಷಗಳು ರಾಷ್ಟ್ರೀಯ ಪಕ್ಷಗಳಿಗೆ ಕಲಿಸುತ್ತಾ ದೇಶವನ್ನು ಪಂಥೀಯ ರಾಷ್ಟ್ರವಾದದಿಂಧ ಆಗುವ ಅಪಾಯಗಳಿಂದ ತಪ್ಪಿಸಬೇಕು.

## ಪರಸ್ಪರ ಟೀಕೆ ಮತ್ತು ವಿಮರ್ಷೆ

ಪರಸ್ಪರ ಟೀಕೆ ಮತ್ತು ವಿಮರ್ಷೆ ಮಾಡುವದು ಪ್ರಜಾಪ್ರಭುತ್ವದ ಮುಖ್ಯ ಲಕ್ಷಣ. ಆಂತರಿಕ ವಿಮರ್ಷೆ ಮತ್ತು ಪರಸ್ಪರ ಟೀಕೆ ಇದ್ದರೆ ಮಾತ್ರ ಪ್ರಜಾಪ್ರಭುತ್ವ ಆರೋಗ್ಯಯುತವಾಗಿರಲು ಸಾಧ್ಯ. ಇಂತಹ ಚಟುವಟಿಕೆ ಕೇವಲ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ಇರದೆ ಎಲ್ಲ ಪಕ್ಷಗಳು ಎಲ್ಲರನ್ನು ವಿಮರ್ಷಿಸಬೇಕು. ಹೀಗಿದ್ದರೆ ಮಾತ್ರ ವಿವಿಧ ಪಕ್ಷ ಮತ್ತು ಅವುಗಳ ನಾಯಕರುಗಳ ನ್ಯೂನ್ಯತೆಗಳು ಬಯಲಿಗೆ ಬರುತ್ತವೆ. ಟೀಕೆ ಮತ್ತು ವಿಮರ್ಷೆಯು ತಾತ್ವಿಕವಾಗಿರಬೇಕು ಹೊರತು ವಯಕ್ತಿಕವಾಗಿರಬಾರದು. ವಯಕ್ತಿಕ ಜೀವನ ಸಾರ್ವಜನಿಕ ಜೀವನಕ್ಕೆ ಧಕ್ಕೆ ತರುವಂತಿದ್ದರೆ ವಯಕ್ತಿಕ ವಿಷಯಗಳನ್ನು ಚರ್ಚೆ ಮತ್ತು ವಿಮರ್ಷೆ ಮಾಡುವದರಲ್ಲಿ ತಪ್ಪೆನಿಲ್ಲ. ರಾಜಕೀಯ ವಿಮರ್ಷೆ ಪ್ರಾಮಾಣಿಕವಾಗಿ ಜನಪರವಾಗಿದ್ದರೆ ಏನೆಲ್ಲಾ ಸಾಧಿಸಬಹುದು ಎಂದು 2024ರ ಚುನಾವಣೆ ರಾಜಕೀಯ ಪಕ್ಷಗಳಿಗೆ ಪಾಠ ಕಲಿಸಿದೆ. ಕಾಂಗ್ರೆಸ್ ಪಕ್ಷ ಮತ್ತು ಇತರ ಪಕ್ಷಗಳು ಆಡಳಿತ ಪಕ್ಷದ ಜನವಿರೋಧಿ ನೀತಿ ಮತ್ತು ಕೆಲಸಗಳನ್ನು ಸತತವಾಗಿ ಮತ್ತು ಪ್ರಾಮಾಣಿಕವಾಗಿ ವಿಮರ್ಷಿಸಿ ಅದರ ನಕಲಿ ನಿಲುವುಗಳನ್ನು ಜನಸಾಮಾನ್ಯರ ಅರಿವಿಗೆ ತಲುಪುವಂತೆ ಸಮರ್ಪಕ ಕೆಲಸ ಮಾಡಿವೆ. ಮುಂದಿನ 5 ವರ್ಷಗಳಲ್ಲಿ ವಿರೋಧ ಪಕ್ಷಗಳು ವಿಮರ್ಷೆಯ ಕುರಿತು ಬಹು ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗಿದೆ. ತಾತ್ಕಾಲಿಕ ಅವಕಾಶಕ್ಕಾಗಿ ತಮ್ಮನ್ನು ತಾವೆ ವಿಮರ್ಷಿಸಿದರೆ ಅಥವಾ ಒಬ್ಬರ ಕಾಲು ಇನ್ನೊಬ್ಬರು ಜಗ್ಗುತ್ತಾ ಹೋದರೆ ತಾವೆ ರಾಜಕೀಯ ಪ್ರಸ್ತುತತೆಯಿಂದ ಹೊರಗುಳಿಯುವ ಅವಕಾಶವನ್ನು ಸ್ವಾಗತಿಸಿದಂತಾಗುತ್ತದೆ.

## ಸದ್ಯದ ಸಂವಿಧಾನದ ಆಶಯಗಳನ್ನು ಇನ್ನೂ ಹೆಚ್ಚಿಗೆ ಸದೃಢ ಮಾಡುವ ಪ್ರಯತ್ನ

ಸೈದ್ಧಾಂತಿಕವಾಗಿ ಹೇಳುವದಾದರೆ, ಜಗತ್ತಿನ ಅನೇಕ ಸಂವಿಧಾನಗಳನ್ನು ಪರಿಶೀಲಿಸಿದಾಗ ಭಾರತದ ಸಂವಿಧಾನವು ಅವುಗಳಿಗಿಂತ ಒಂದು ಹೆಜ್ಜೆ ಮುಂದು ಹೋಗಿ ಸಮಾನತೆಯ ಮತ್ತು ನ್ಯಾಯಪರ ಮೌಲ್ಯಗಳನ್ನು ಅತಿ ವಿವರವಾಗಿ ತಿಳಿಸಿರುವಂತಹ ಪತ್ಯ. ಆದರೆ, ಸಮಾನತೆಯ ಮತ್ತು ನ್ಯಾಯಪರ ಮೌಲ್ಯಗಳನ್ನು ಕಾರ್ಯಗತಗೊಳಿಸುವಲ್ಲಿ ನಮ್ಮ ಸರ್ಕಾರಗಳು ತೃಪ್ತಿಕರ ಸಫಲತೆಯನ್ನು ಸಾಧಿಸಿಲ್ಲ. ಹೀಗಾದಾಗ, ಅನೇಕರಲ್ಲಿ ಸಂವಿಧಾನದ ಶಕ್ತತೆ ಬಗ್ಗೆ ಸಂಶಯಗಳು ಬರುವದು ಸಹಜ. ಸಂಶಯಗಳಿಗೆ ಕೊಡುವ ಪುರಾವೆಗಳೆಂದರೆ, ಸಂವಿಧಾನ ಜೀವಂತವಿದ್ದಾಗಲೆ ಸಂವಿಧಾನಿಕ ಸಂಸ್ಥೆಗಳು ತಾವುಗಳು ಸಾಂವಿಧಾನಿಕವಾಗಿ ಮಾಡಬೇಕಾದ ಕೆಲಸಗಳನ್ನು ಪಾಲನೆ ಮಾಡದೆ ಇರುವದು, ಜಾತ್ಯತೀತ ಮೌಲ್ಯ ಸಂವಿಧಾನದ ತಿರುಳಾದರೂ ಕೋಮುವಾದಿ ಪಕ್ಷಗಳು ಸರ್ಕಾರ ರಚನೆ ಮಾಡಿ ಸಂವಿಧಾನದ ಮೌಲ್ಯಗಳ ವಿರೋಧಿ ಕೆಲಸ ಮಾಡುವದು, ಸಾಂಸ್ಕೃತಿಕ ಸ್ವಾತಂತ್ರ್ಯ ಸಂವಿಧಾನದ ಮೂಲಭೂತ ಹಕ್ಕಾದರೂ ನಾಗರಿಕರು ಅದನ್ನು ಬಳಕೆ ಅಥವಾ ಪಾಲಿಸುವಾಗ ಅದರ ಮೇಲೆ ನಿರ್ಭಂದನೆಗಳನ್ನು ಹೇರುವದು, ಇತ್ಯಾದಿ. ಸಂವಿಧಾನದ ಎಲ್ಲ ಮೌಲ್ಯಗಳಿಗೆ ಹೆಚ್ಚಿನ ಶಕ್ತಿ ಬರಲು ಅವುಗಳನ್ನು ಸದೃಢ ಮಾಡಬೇಕು. ಈ ನಿಟ್ಟನಲ್ಲಿ ದೇಶದ ಪ್ರಗತಿಪರ ಪಕ್ಷಗಳು ಮತ್ತು ಚಳುವಳಿಗಳು ಸತತವಾಗಿ ಜನರಲ್ಲಿ ಪ್ರಜ್ಞೆ ತರುತ್ತಾ ಸಂವಿಧಾನದ ಮೌಲ್ಯಗಳ ಬಗ್ಗೆ ವಿಶ್ವಾಸ ಬರುವಂತೆ ಕ್ರಿಯಾಶೀಲರಾಗಬೇಕು. ಪ್ರಗತಿಪರರು ಅಧಿಕಾರದಲ್ಲಿದ್ದಾಗ ಈ ನಿಟ್ಟಿನಲ್ಲಿ ಸಂವಿಧಾನದಲ್ಲಿ ಕೆಲವೊಂದು ತಿದ್ದುಪಡೆ ಮಾಡಿದರೆ ತಪ್ಪೆನಿಲ್ಲ. ಕೆಲವು ಹಕ್ಕುಗಳು ಕರ್ತವ್ಯವಾಗಬೇಕು ಮತ್ತು ಕರ್ತವ್ಯಗಳು ಹಕ್ಕುಗಳಾಗಬೇಕು. ಇದನ್ನು ವಿವರಿಸಿ ಹೇಳುವದಾದರೆ, ಸಾಂಸ್ಕೃತಿಕ ಸ್ವಾತಂತ್ರ್ಯ ಕೇವಲ ಜನರ ಹಕ್ಕಾಗಿರದೆ ಅದನ್ನು ಕಾಪಾಡುವದು ಸರ್ಕಾರಗಳ ಕರ್ತವ್ಯವಾಗಬೇಕು. ಪರಿಸರವನ್ನು ಕಾಪಾಡುವದು ಮತ್ತು ಗೌರವಿಸುವದು ಜನರ ಬರಿ ಕರ್ತವ್ಯವಾಗಿರದೆ ಹಕ್ಕಾಗಿರಬೇಕು. ಅಭಿವೃದ್ಧಿಯ ಹೆಸರಿನಲ್ಲಿ ಪರಿಸರವನ್ನು ಹಾಳುಮಾಡಿ ಜನರ ಜೀವನೋಪಾಯಕ್ಕೆ ಸರ್ಕಾರಗಳು ತೊಂದರೆ ಕೊಟ್ಟರೆ ಸರ್ಕಾರಗಳ ಇಂತಹ ಜನವಿರೋಧಿ ನೀತಿ ಮತ್ತು ಕಾರ್ಯಗಳನ್ನು ತಡೆಗಟ್ಟುವದು ಪ್ರತಿಯೊಬ್ಬ ನಾಗರಿಕನ ಸಾಂವಿಧಾನಿಕ ಹಕ್ಕಾಗಬೇಕು. ಇದೊಂದು ಕ್ರಾಂತಿಕಾರಿ ವಿಚಾರವಾದರೂ, ಪ್ರಗತಿಪರ ಪಕ್ಷ ಮತ್ತು ಚಳುವಳಿಗಳು ಪ್ರಜಾಸತ್ತಾತ್ಮಕ ಮತ್ತು ಅಹಿಂಸಾತ್ಮಕ ಮಾರ್ಗಗಳಿಂದ ಸಂವಿಧಾನಿಕ ಬದಲಾವಣೆಗಳನ್ನು ತಂದರೆ ದೇಶದ ಪ್ರಜಾಪ್ರಭುತ್ವದ ಗುಣಮಟ್ಟ ಇನ್ನು ಹೆಚ್ಚಾಗುತ್ತದೆ. ಪ್ರಗತಿಪರ ಪಕ್ಷ ಮತ್ತು ಚಳುವಳಿಗಳು ಇಂತಹ ಪ್ರಜಾಸತ್ತಾತ್ಮಕ ಕಾರ್ಯವನ್ನು ತಮ್ಮ ಎದುರಿಗಿರುವ ಸವಾಲು ಮತ್ತು ಜವಾಬ್ದಾರಿಯೆಂದು ಪರಿಗಣಿಸುವ ಸಮಯ ಬಂದಿದೆ. ಮುಂದಿನ 5 ವರ್ಷಗಳಲ್ಲಿ ಪ್ರಗತಿಪರ ಪಕ್ಷಗಳು ಸಂಸತ್ತಿನ ಒಳಗಡೆ ಮತ್ತು ಹೊರಗಡೆ ಜವಾಬ್ದಾರಿಯುತವಾಗಿ ನಡೆದುಕೊಂಡು ಆಡಳಿತ ಪಕ್ಷದ ಜನವಿರೋಧಿ ನೀತಿಗಳನ್ನು ಬಯಲಿಗೆಳೆದು ಜನರ ವಿಶ್ವಾಸದಿಂದ ದೇಶದ ಪ್ರಜಾಸತ್ತಾತ್ಮಕ ಬದಲಾವಣೆಯಲ್ಲಿ ಪಾತ್ರರಾಗದಿದ್ದರೆ ದೇಶದಲ್ಲಿರುವ ಪ್ರಜಾಪ್ರಭುತ್ವವನ್ನು 'ಹೆಸರಿಗೆ ಮಾತ್ರದ ಪ್ರಜಾಪ್ರಭುತ್ವ' ಎಂದು ಕರೆಯಲಾಗಬಹುದು.

## ಜಡತ್ವ ಮತ್ತು ಹೋರಾಟ

ಅದೇ ಸೂರ್ಯ, ಅದೇ ಚಂದ್ರ
ಅದೇ ಹಗಲು – ರಾತ್ರಿಗಳಲ್ಲಿ
ಬದಲಾಗುತ್ತಾ ಸಾಗಿವೆ
ಬದುಕು, ಸಂಸ್ಕಾರ, ಸಂಸ್ಕೃತಿ!

ಭಕ್ತಿಯಲ್ಲಿ ಬಣ್ಣ ಬೆರೆಸಿ
ಮನುಷ್ಯ – ಮನುಷ್ಯರ ನಡುವೆ
ಕಂದಕವಿರಿಸಿ "ಮನುಷ್ಯತ್ವ ಮಾರಿ"
ನಡೆಯುತ್ತಿದೆ ವರ್ತಮಾನದ ಬದುಕು!

ಕರುಳಿನ ಕುಡಿಗಳಿಗೆ
ದಾಯಾದಿ ದ್ವೇಷವ ಉಣಿಸಿ
ಉರಿಯುವ ಗಳ ಇರಿದು
ಚಳಿ ನೀಗಿಸಿಕೊಳ್ಳುತ್ತಿದೆ ಇಂದಿನ ಸಂಸ್ಕಾರ!

ಮೋಸ, ವಂಚನೆ, ದಬ್ಬಾಳಿಕೆ
ದಗಲ್ಬಾಜಿಗಳ ಹೆಡಮುರಗೆಯಲಿ
ನ್ಯಾಯ, ನೀತಿ, ನಿಷ್ಠೆಗಳ ಉಸಿರು
ಹೆಪ್ಪುಗಟ್ಟುವಂತೆ ಮಾಡಿದೆ ಇಂದಿನ ಸಂಸ್ಕೃತಿ

ಕುಸಿದು, ಕುಸಿದು
ಬೀಳುತ್ತಿರುವ
ಮೌಲ್ಯಗಳ ನಡುವೆಯೂ
ಕುಗ್ಗಲು ಬಿಟ್ಟಿಲ್ಲ "ಆದರ್ಶದ ಬಲ"
ನಡೆದಿದೆ ನಿರಂತರ ಹೋರಾಟದ ಛಲ!!

– ಎಚ್ ಕೆ ಕೊಟ್ರಪ್ಪ, ಹರಿಹರ